


ರಾಜ್ಯ ರಾಜಕೀಯದಲ್ಲಿ ತಲ್ಲಣ ಮೂಡಿಸಿರುವ ಸಿ.ಡಿ. ಪ್ರಕರಣದ ವಿಚಾರಣೆ ನಡೆಯುತ್ತಿದೆ. ಈ ಪ್ರಕರಣಕ್ಕೆ ಸೀಮಿತವಾಗಿ ಯೋಚಿಸುವುದಾದರೆ, 'ಯಾರು ಅಪರಾಧಿ, ಯಾರು ತಪ್ಪು ಮಾಡಿದ್ದಾರೆ, ತಪ್ಪುಗಳ ಹಿಂದಿನ ಪ್ರೇರಣೆಗಳೇನು' ಎಂಬೆಲ್ಲ ವಿಷಯಗಳ ಕುರಿತು ತನಿಖೆ ಸಾಗುತ್ತಿದೆ. ತನಿಖೆಯ ಫಲಿತಾಂಶವನ್ನು ಆಧರಿಸಿ ನ್ಯಾಯಾಲಯ ತೀರ್ಪು ನೀಡಲಿದೆ. ಆದರೆ ಈ ನಡುವೆ ಪ್ರಕರಣದ ಕುರಿತು ಜನಸಾಮಾನ್ಯರ ನಡುವೆ ನಡೆಯುವ ಚರ್ಚೆಯನ್ನೂ ನಾವು ಗಮನಿಸಬೇಕು. ಆ ಚರ್ಚೆಯಲ್ಲಿ ಹೊಮ್ಮುವ ಅಭಿಪ್ರಾಯಗಳು ಸಮಾಜದ ಮೇಲೆ ಪರಿಣಾಮ ಬೀರುತ್ತದೆ. ಅಲ್ಲದೆ ಈ ಪ್ರಕರಣವನ್ನು ನೆಪವಾಗಿಟ್ಟುಕೊಂಡು ನಮ್ಮ ವ್ಯವಸ್ಥೆಯ ಲೋಪದೋಷಗಳ ಕುರಿತೂ ಸಾಕಷ್ಟು ಚರ್ಚೆಗಳು ನಡೆಯುತ್ತಿವೆ. ಅಂತಹ ಚರ್ಚೆಗಳು ಪಡೆದುಕೊಳ್ಳುತ್ತಿರುವ ಆಯಾಮಗಳಲ್ಲಿ ಬಹುಮುಖ್ಯವಾದುದು – 'ಮಹಿಳಾ ಪರ ಕಾನೂನುಗಳ ದುರ್ಬಳಕೆಯಾಗುತ್ತಿದೆ' ಎಂಬ ಒಂದು ಆರೋಪ.

ಪ್ರಕರಣವೊಂದರಲ್ಲಿ ಸಾಮಾನ್ಯವಾಗಿ ವಾದಿ–ಪ್ರತಿವಾದಿಗಳು ತಮಗೆ ಕಾನೂನಿನಲ್ಲಿ ಲಭ್ಯವಿರುವ ಎಲ್ಲ ಅವಕಾಶಗಳನ್ನು ಸಹಜವಾಗಿಯೇ ಬಳಸಿಕೊಂಡು ತಮ್ಮ ನಿಲುವುಗಳನ್ನು ಸಾಬೀತುಪಡಿಸಲು ಯತ್ನಿಸುತ್ತಿರುತ್ತಾರೆ. ಆದರೆ ಸಾಮಾಜಿಕವಾಗಿ ನಡೆಯುವ ಚರ್ಚೆಗಳು ಮಾತ್ರ (ಜನರು ಹೆಚ್ಚೆಚ್ಚು ಶಿಕ್ಷಿತರಾಗುತ್ತಿದ್ದರೂ) ಮಹಿಳಾ ವರ್ಗದ ಬಗ್ಗೆ ಸುಶಿಕ್ಷಿತ ಸಮಾಜದ ಅಭಿಪ್ರಾಯ ಏನಿದೆ ಎಂಬುದನ್ನು ಸ್ಪಷ್ಟವಾಗಿ ವ್ಯಕ್ತಪಡಿಸುತ್ತಿದೆ.

ಹೆಣ್ಣು ತನಗೆ ಅರಿಯದಂತೆಯೇ ಸಾಮಾಜಿಕ ರಾಜಕಾರಣದ ಭಾಗವಾಗುವುದಕ್ಕೆ ಒಂದು ಉದಾಹರಣೆ ಗಮನಿಸಿ:

ಬಾಡಿಗೆಗೆಂದು ಮನೆ ಪಡೆದ ಕುಟುಂಬವೊಂದು, ಮಾಲೀಕರು ಮನೆ ಬಿಟ್ಟುಕೊಡುವಂತೆ ಹೇಳಿದಾಗ, ಯಾವುದೇ ಕಾರಣಕ್ಕೂ ಮನೆ ಖಾಲಿ ಮಾಡುವುದಿಲ್ಲ ಎಂದು ಪಟ್ಟುಹಿಡಿಯಿತು. ಇದೊಳ್ಳೆ ಪೀಕಲಾಟಕ್ಕೆ ಬಂತಲ್ಲ ಎಂದು ಮಾಲೀಕರು ಪೇಚಾಡತೊಡಗಿದರು. ಅವರಿವರ ಬಳಿ ಹೇಳಿಸಿ, ಬಾಡಿಗೆದಾರರ ಮನವೊಲಿಸಲು ಪ್ರಯತ್ನಿಸಿದರು. ಆದರೂ ಯಾವುದೇ ಪ್ರಯೋಜನ ಆಗಲಿಲ್ಲ. ತಮಗೆ ಮನೆಯ ಅಗತ್ಯವಿದೆ ಎಂದು ಬಾಡಿಗೆದಾರರ ಮುಂದೆ ಏನೆಲ್ಲಾ ವಿವರಣೆಗಳನ್ನು ಕೊಟ್ಟರೂ ಉಪಯೋಗ ಆಗಲಿಲ್ಲ. ಕೊನೆಗೆ ಮಾಲೀಕರು ಅನಿವಾರ್ಯವಾಗಿ ಕೋರ್ಟ್ ಮೆಟ್ಟಿಲು ಹತ್ತಿದರು.



